ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಜ್ಞಾನಸಾಗರ ಆವರಣ, ವಿನಾಯಕ ನಗರ, ಬಳ್ಳಾರಿ - 583105
ಕುಲಸಚಿವರು ದೂರವಾಣಿ ಸಂ. 08392-242703

ಕ್ರ.ಸಂ. ವಿಶ್ರೀಕೃವಿಬ/ಆಡಳಿತ/ಪಪ್ರ/2016-17/ 2916 ದಿನಾಂಕ. 22.11.2016

## ಪತ್ರಿಕಾ ಪ್ರಕಟಣೆ

### ದೂರದರ್ಶನ ಮತ್ತು ಸಾಮಾಜಿಕ ಜಾಲತಾಣದಲ್ಲಿ ಬಿತ್ತರಗೊಂಡಿರುವ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಮೊದಲನೇ ಸೆಮಿಸ್ಟರ್‌ನ ಇಂಗ್ಲೀಷ್ ಪ್ರಶ್ನೆ ಪತ್ರಿಕೆ ಸೋರಿಕೆ ಶುದ್ಧ ಸುಳ್ಳು.

ದಿನಾಂಕ. 21.11.2016 ರಂದು ದೂರದರ್ಶನ ಮಾಧ್ಯಮದಲ್ಲಿ ಬಿತ್ತರಗೊಂಡಿರುವ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಸ್ನಾತಕ ಪದವಿ ಮಹಾವಿದ್ಯಾಲಯಗಳ ಪರೀಕ್ಷೆಗೆ ಸಂಬಂಧಿಸಿದಂತೆ BA, B.Sc. B.Com. BCA, BBM ಮತ್ತು BSW ಪ್ರಥಮ ಸೆಮಿಸ್ಟರ್ ಬೇಸಿಕ್ ಇಂಗ್ಲೀಷ್ ಕೋಡ್ ನಂ. 20101 ಪ್ರಶ್ನೆ ಪತ್ರಿಕೆಯ ಪರೀಕ್ಷೆಯು ದಿನಾಂಕ. 22.11.2016 ಬೆಳಿಗ್ಗೆ 9.00 ರಿಂದ 12.00 ಎಂದಿನಂತೆ ನಡೆಯಲಿದೆ. ಇದರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಪ್ರಶ್ನೆ ಪತ್ರಿಕೆ ವಿಷಯ ಶುದ್ಧ ಸುಳ್ಳಾಗಿರುತ್ತದೆ. ಈ ಮೇಲೆ ಹೇಳಿದ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದಿಲ್ಲ. ವಿದ್ಯಾರ್ಥಿಗಳು ಸುಳ್ಳು ಸುದ್ದಿಗೆ ಕಿವಿಗೊಡಬಾರದು ಮತ್ತು ದಂದ್ವಗೊಳ್ಳದೆ ಪರೀಕ್ಷೆ ಬರೆಯಬೇಕು. ವಿಶ್ವವಿದ್ಯಾಲಯ ಹಾಗೂ ಅಧಿಕಾರಿಗಳ ಘನತೆ, ಗೌರವಕ್ಕೆ ಧಕ್ಕೆ ತರಲು ಕಿಡಿಗೇಡಿಗಳ ಹೀನ ಕೃತ್ಯವಾಗಿರುತ್ತದೆ. ಈ ಸಂಬಂಧ ಪೋಲಿಸ್ ಠಾಣೆಯಲ್ಲಿ ಸೈಬರ್ ಕ್ರೈಮ್ ಮುಖಾಂತರ ತನಿಖೆ ನಡೆಸಲು ದೂರನ್ನು ಈ ದಿನ ದಾಖಲಿಸಲಾಗಿದೆ.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ